Regd No BG 165 18-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು 1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [ 2 ಪೈಸೆ

# ಮೈಸೂರು ಮಂತ್ರಿಮಂಡಲದಲ್ಲಿ ಐಕ್ಯತೆ ಇದೆ

### ಇವರಿಗೂ ಲೈಂಗಿಕ ಶಿಕ್ಷಣ

ಪಶ್ಚಿಮ ಜರ್ಮನಿಯ ಓರ್ಲಿಂಗೊರ್ಸೆ ರಾತ್ರಿ ಶಾಲೆಯಲ್ಲಿ ಅಜ್ಜಿಯರಿಗೂ ಅಜ್ಜಂದಿರಿಗೂ ಲೈಂಗಿಕ ಶಿಕ್ಷಣ ಕೊಡಲಾಗುತ್ತಿದೆ: 91 ವರ್ಷದ ಒಬ್ಬ ಪುರುಷನೂ, 93 ವರ್ಷದ ಓರ್ವ ಮಹಿಳೆಯೂ ಪಾಠ ಹೇಳಿಸಿಕೊಂಡರು.

★

### ಇಂಗ್ಲೀಷು ಮಾಧ್ಯಮ

ತಮಿಳುನಾಡುವಿನಲ್ಲಿ 6000 ಪ್ರಾಥಮಿಕ ಇಂಗ್ಲೀಷು ಮಾಧ್ಯಮ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಗಳಿರುವವೆಂದೂ 3000 ಉಪಾಧ್ಯಾಯರಿರುವರೆಂದೂ, 1 ಲಕ್ಷ ಮಕ್ಕಳು ಶಿಕ್ಷಣ ಪಡೆಯುತ್ತಿವೆಯೆಂದೂ, ಆದರೆ ಸರಕಾರ ಇವುಗಳನ್ನು ಮಾನ್ಯಮಾಡಿಲ್ಲವೆಂದೂ ಪ್ರಕಟವಾಗಿದೆ.

★

### ಪ್ರವಾಹ ಪೀಡಿತರಿಗೆ

ಬಾಗಲಕೋಟೆ— ಪ್ರವಾಹದಿಂದ ಸಂಕಟಕ್ಕೀಡಾಗಿರುವ ಆರಕೇರಿ ಗ್ರಾಮಕ್ಕೆ ಸಹಕಾರ ಮಂತ್ರಿ ಶ್ರೀ ನಾಡಗೌಡರು, ಜಿಲ್ಲಾ ಮತ್ತು ವಿಭಾಗಾಧಿಕಾರಿಗಳು ಭೇಟಿ ಕೊಟ್ಟು ಸಂತ್ರಸ್ತರಿಗೆ ಸರಕಾರದ ಸಹಾಯದ ಭರವಸೆ ನೀಡಿದರು.

★

### ಅಶ್ರುವಾಯು ಪ್ರಯೋಗ

ವಾಷಿಂಗ್ಟನ್— ನಿನ್ನೆ 250000 ವಿಯೆಟ್ನಾಂ ಯುದ್ಧ ವಿರೋಧಿಗಳು ಪೆನ್ಸಿಲ್ವೇನಿಯಾ ರಸ್ತೆ ಮೂಲಕ ಮೆರವಣಿಗೆ ನಡೆಸಿದರು – ಕಡೆಗೆ ರಾತ್ರಿಯಲ್ಲಿ ನ್ಯಾಯಾಂಗ ಇಲಾಖಾ ಹೆತ್ತರ ಗುಂಪಿನಲ್ಲಿ ಗಲಾಟೆಯಾಗಲು ಪೋಲೀಸರು ತುಂಬಾ ಅಶ್ರುವಾಯು ಪ್ರಯೋಗಿಸಿದರು.

●

○ತಿರುಪತಿ— ಹೊಸ 22 ಕ್ಯಾರೆಟ್ ಭಂಗಾರದ ಸಹಸ್ರನಾಮ ಹಾರವನ್ನು ಶ್ರೀ ವೆಂಕಟೇಶ್ವರ ಸ್ವಾಮಿಗೆ ಅಲಂಕರಿಸಲಾಯಿತು – ರೂ 6 50 ಲಕ್ಷ ಖರ್ಚಿನ 32 ಕೆಜಿ ತೂಕದ ಈ ಹಾರದ ಮೆರವಣಿಗೆಯು ಶುಕ್ರವಾರ ತಿರುಮಲೈನಲ್ಲಿ ನಡೆಯಿತು.

## ಸಂಕಿಪ್ತ ಪ್ರಕಟಣೆ

ನಂ. ಎ (2) ಎಸ್‌ಐಎಲ್
40 / 146 / 69-70
ತಾ ॥ 11-11-1969

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಮೈಸೂರು–4 ರಲ್ಲಿರುವ ಸರ್ಕಾರಿ ಗಂಧದ ಕೋಠಿಯಲ್ಲಿ 7 ( ಏಳು ) ಟನ್‌ಗಳ ಅಂದಾಜು ಪ್ರಮಾಣದ ಗಂಧದ ಮರದ ಬಿಳಿ ಚಕ್ಕೆಗಳು ದಾಸ್ತಾನಾಗಿರುವುದನ್ನು ಮೈಸೂರು–6 ರಲ್ಲಿರುವ, ಮೈಸೂರು ವಿಭಾಗದ ಅರಣ್ಯ ಅಧಿಕಾರಿಯವರಿಂದ ಅಥವಾ ಈ ಉದ್ದೇಶಕ್ಕಾಗಿ ಅವರಿಂದ ನೇಮಿತರಾಗಿರುವ ಇತರ ಯಾವುದೇ ಅಧಿಕಾರಿಯವರಿಂದ 4–12–1969 ರ ಬೆಳಿಗ್ಗೆ 11 ಗಂಟೆಗೆ ಮೈಸೂರು – 4 ರಲ್ಲಿರುವ ಸರ್ಕಾರಿ ವುಡ್ ಯಾರ್ಡ್ ಮತ್ತು ಗಂಧವಮರದ ಕೋಠಿಯಲ್ಲಿ ಬಹಿರಂಗ ಹರಾಜಿನಲ್ಲಿ ಮಾರಲ್ಪಡುವುದು.

ಸೂಚನೆ— ಮೈಸೂರು – 5 ರಲ್ಲಿರುವ ಮೈಸೂರು ವಿಭಾಗದ, ವಿಭಾಗದ ಅರಣ್ಯ ಅಧಿಕಾರಿಯವರೊಡನೆ ಅಥವಾ ಮೈಸೂರು 4 ರಲ್ಲಿರುವ ಸರ್ಕಾರಿ ವುಡ್‌ಯಾರ್ಡ್ ಮತ್ತು ಗಂಧವಮರದ ಕೋಠಿಯ ಆಫೀಸರ್-ಇನ್-ಛಾರ್ಜ್ ರೊಡನೆ, ಕೆಲಸದ ಯಾವುದೇ ದಿನಗಳಲ್ಲಿ ಕೆಲಸದ ವೇಳೆಗಳಲ್ಲಿ ಹೆಚ್ಚು ವಿವರಗಳಿಗಾಗಿ ದಯವಿಟ್ಟು ಸಂಪರ್ಕ ಪಡೆಯಿರಿ.

ಸಹಿ / – ಬಿ. ಬಾಲಯ್ಯ
ವಿಭಾಗದ ಅರಣ್ಯ ಅಧಿಕಾರಿಯವರು
ಮೈಸೂರು ವಿಭಾಗ, ಮೈಸೂರು

### ಇಂದಿರಾ ಸರ್ಕಾರದ ವಿಜಯ

ನವದೆಹಲಿ— 166 ಹೆಚ್ಚು ಮತಗಳಿಂದ ಇಂದಿರಾ ಸರಕಾರವು ನಿನ್ನೆ ಲೋಕಸಭೆಯಲ್ಲಿ ರಾಬರ್ಟ್ ಸಮಸ್ಯೆ ಕುರಿತ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ವಿಜಯ ಗೊಂಡಿತು.

### ರಾಂ ಮೇಲೆ ಕ್ರಮವಿಲ್ಲ

ನವದೆಹ— ಮಂತ್ರಿ ಜಗಜೀವನರಾಂ ರವರ ಆದಾಯ ತೆರಿಗೆ ಬಾಕಿ ಬಗ್ಗೆ ಯಾವ ಕಾರ್ಯಕ್ರಮ ಕೈಗೊಳ್ಳಲು ಸೂಕ್ತವಾಗಿ ಕಂಡುಬಂದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

### ಪಾರ್ಲಿಮೆಂಟು

ನವದೆಹಲಿ— ನಿನ್ನೆ ಲೋಕಸಭೆ ಪ್ರಾರಂಭಕ್ಕೆ ಮುಂಚೆ ಗಲಾಟೆ ಹೆಚ್ಚಿತು – ಪಾರ್ಲಿಮೆಂಟು ಕಟ್ಟಡಕ್ಕೆ ಆಗಲೇ ಭರ್ತಿಯಾಗಿದ್ದ ಪ್ರೇಕ್ಷಕರ ಗ್ಯಾಲರಿಗೆ ಪ್ರವೇಶಿಸಲು ನೂಕು ನುಗ್ಗಲು ಪ್ರಯತ್ನ ನಡೆಯಿತು – ಪಾರ್ಲಿಮೆಂಟು ಭವನದ ಆಚೆ ಉದ್ದವಾದ ಕ್ಯೂನಲ್ಲಿ ನಿಂತಿದ್ದ ಜನರು ಘೋಷಣೆ ಮಾಡುತ್ತಿದ್ದರು – ಲೋಕಸಭಾ ಕಚೇರಿ 3000 ಪ್ರೇಕ್ಷಕರ ಪಾಸುಗಳನ್ನು ಕೊಟ್ಟಿತ್ತು.

★

### ಮೈಸೂರು ಮಂತ್ರಿಮಂಡಲ

ಬೆಂಗಳೂರು— ತಮ್ಮ ಮಂತ್ರಿ ಮಂಡಲದಲ್ಲಿ ಯಾವ ಭೇದಭಾವವೂ ಇಲ್ಲದೆ ಐಕ್ಯತೆ ಇದೆಯೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಹೇಳಿದರು – ತಮ್ಮ ಮಂತ್ರಿಮಂಡಲದ ಯಾರೊಬ್ಬರೂ ಡೆಲ್ಲೀ ಏ ಐ ಸಿ ಸಿ ಮಿಾಟಿಂಗಿಗೆ ಹೋಗುವುದಿಲ್ಲ ಸೆನೆಂದು ತಿಳಿಸಿದರು – ಶಾಸನಸಭೆಯು ಡಿಸಂಬರಿನಲ್ಲಿ ದಡೆಯುವ ಸಂಭವವಿದೆಯೆಂದೂ, ಮುಂದುವರಿಸಿದ ಎಂ ಪಿ ಸಿ ಸಿ ಮಿಾಟಿಂಗು ಬಿಜಾಪುರದಲ್ಲಿ ಮುಂದಿನ ತಿಂಗಳು ನಡೆಯುವದೆಂದೂ ಹೇಳಿದರು.

### ಚಂಡೀಘರಕ್ಕಾಗಿ ಪ್ರದರ್ಶನ

ನವದೆಹಲಿ— ಚಂಡೀಘರಕ್ಕಾಗಿ ತಮ್ಮ ಹಕ್ಕಿಗೆ ಬೆಂಬಲಕ್ಕಾಗಿ ನಿನ್ನೆ ಅಖಿಲ ಪಕ್ಷಗಳ ಹರಿಯಾಣಾ ಕಾರ್ಯಾಚರಣ ಸಮಿತಿ ನಡೆಸಿತು – ಧ್ವಜ," ಘೋಷಣೆಗಳೊಡನೆ ಹರಿಯಾಣಾ ನಿವಾಸಿಗಳು 4 ಮೈಲಿ ಉದ್ದದ ಮೆರವಣಿಗೆ ನಡೆಸಿದರು.

### ನಾಗಪುರ ಬಂದ್

ನಾಗಪುರ— ಪ್ರತ್ಯೇಕ ವಿದರ್ಭಾ ರಾಜ್ಯ ಬಗ್ಗೆ ಸರಕಾರದ ಗಮನ ಸೆಳೆಯಲು ಮಹಾ ವಿದರ್ಭಾರಾಜ್ಯ ಸಂಗ್ರಾರ್ಶ ಸಮಿತಿ ಕೊಟ್ಟಿದ್ದ ಕರೆಯಂತೆ ನಿನ್ನೆ ನಾಗಪುರ ಬಂದ್ ಯಶಸ್ವಿಯಾಗಿ ನಡೆಯಿತು

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್‌ಬ್ಯಾಂಕ್ ರೋಡ್, ಮೈಸೂರು

### ಚಮತ್ಕಾರ ಗಡಿಯಾರ

ಹ್ಯಾಂಬರ್ಗ್ ( ಡಾಡ )— ಸ್ಯಾಕ್ಸೋನಿಯಲ್ಲಿ 1904 ರಲ್ಲಿ ತಯಾರಿಸಿದ ಗಾಕೆಟ್ಟ್ ವಾಚ್ ಒಂದರಲ್ಲಿ, ಘಂಟೆ, ನಿಮಿಷ, ಸೆಕೆಂಡ್, ದಿನ, ತಿಂಗಳು, ವರ್ಷ, ವುಗಳನ್ನು ಮಾತ್ರವಲ್ಲದೆ ( ಲೀಪ್ ಈಯರ್ ) ಅಧಿಕ ವರ್ಷದ ಫೆಬ್ರವರಿಯಲ್ಲಿ 29 ದಿನಗಳನ್ನು ತೋರಿಸುವ ಅಳವಡಿಕೆಯೂ ಸಹ ಇದೆ. ಇದನ್ನು 150 ಗ್ರಾಂ ಗಿನ 18 ಕ್ಯಾರೆಟ್ ಒಂಗಾರವನ್ನು ಉಪಯೋಗಿಸಿ ತಯಾರಿಸಿದ್ದಾರೆ. ಇದರ ತೂಕ 220 ಗ್ರಾಂಗಳು : ಇದರ ಬೆಲೆ 1400 ಡಾಲರುಗಳು. ( ಯೂ ಪಿ ಎಸ್ )

———

### ಜಪಾನಿನಲ್ಲಿ ಜನಸಂಖ್ಯೆ ಇಳಿತಾಯ

ಜಪಾನಿನ ಕ್ಯಾಬಿನೆಟ್ ಜನರಲ್ ಪ್ರಕಟಿಸಿರುವಂತೆ— ಜಪಾನಿನಲ್ಲಿ ಜನ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಮೆಯಾಗುತ್ತಿದ್ದು, ಇದನ್ನು ತಪ್ಪಿಸದಿದ್ದರೆ, ಕಾರ್ಮಿಕ ಅಭಾವವು ತೀರ ಕೆಡುವುದು. 1955-65 ರಲ್ಲಿ ಜನನಗಳು 1000 ಜನರಿಗೆ ಶೇಕಡ 13.7 ರಿಂದ 19.4 ರವರೆಗಿತ್ತು. ಯುದ್ಧಕ್ಕೆ ಮುಂಚಿನ ವರ್ಷಗಳಲ್ಲಿ ಸಾಧಾರಣವಾಗಿ ಶೇಕಡ 30 ಕ್ಕೂ ಹೆಚ್ಚಾಗಿತ್ತೆಂದೂ ಪ್ರಕಟವಾಗಿದೆ.

ಜನಸಂಖ್ಯೆ ಕಡಮೆಯಾಗಿರುವುದರಿಂದ ಕಾರ್ಮಿಕರನ್ನು ಇತರ ದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ. ಫ್ರಾನ್ಸಿನಲ್ಲೂ ಹೀಗಿದ್ದು, ಪ್ರತಿ ವರ್ಷ ಸುಗ್ಗಿ ಕಾಲದಲ್ಲಿ ಪೂರು ಮಿಲಿಯ ಇಟಾಲಿಯರನ್ನು ಆಮದು ಮಾಡಿಕೊಳ್ಳಬೇಕಾಗಿದೆ

———

ಮಹಿಳೆಯರು ಎಲ್ಲವನ್ನೂ ತಲೆಕೆಳಕು ಮಾಡುತ್ತಾರೆ; ಅವರನ್ನು ನಿಮ್ಮ ಜೀವಿತದಲ್ಲಿ ಸೇರಿಸಿದಾಗ, ಅವರೊಂದು ಕಡೆ ಎಳೆಯುವುದೂ, ನೀವೊಂದು ಕಡೆ ಎಳೆಯುವುದೂ ಆಗಿದೆ. — ಬರ್ನಾರ್ಡ್ ಷಾ


# ವುಡ್‌ಲಾಂಡ್ ತಾ.14-11-69 ರಿಂದ

ಶಿ ನ ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

## ಹ ಮ್ ನಾ ಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್

ಸಂಗೀತ : ಓ. ಪಿ. ನಯ್ಯರ್

[ ದಿನ 3 ಪ್ರದರ್ಶನಗಳು ]

# ಅಪೆರಾ— 14-11-69 ರಿಂದ

.... ಅತ್ಯಮೋಘ ಕಮಲು ಚಿತ್ರ ....

## ವೇ ಟ್ಟೆ ಕಾ ರ ನ್

ದಿನ 3 ಆಟಗಳು

# SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ-ವರ್ಷಕ್ಕೆ ರೂ- 2

# ದೇಶದ ಹಿತಕ್ಕಾಗಿ ಕುಟುಂಬ ಯೋಜನೆ

# Help The Gorakshana



ಗೋರಕ್ಷಣೆ ಮತ್ತು ವಾಣಿಜ್ಯ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

## Protectthe Cow

Quality Printing — Neat Binding

## Lakshminarasimha Press

Sivarampet, Mysore


# ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited, Printed & Published by Dharmāprachara Nirata M S Krishna Rao ( Proprietor ) at the Satyavadi Press Chamarajapet, Mysore 4